5. ವರದಿಯನ್ನು ಮಂಡಿಸುವುದು

ಶ್ರೀ ಮಲ್ಲಿಕಾರ್ಜುನ ಸಹದೇವಪ್ಪ ಅಕ್ಕಿ:- ಮಾನ್ಯ ಅಧ್ಯಕ್ಷರೆ, ರಾಜ್ಯದ ಐ.ಸಿ.ಡಿ.ಎಸ್. ಯೋಜನೆಗಳಲ್ಲಿ ಪೌಷ್ಟಿಕ ಆಹಾರ ತಯಾರಿಕೆಗೆ ಪೂರೈಕೆಯಾಗಿರುವ ಗೋಧಿ ಮತ್ತು ರವೆ ವಿತರಣೆ ಮತ್ತು ಖರೀದಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಕಾರ್ಮಿಕ, ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿಷಯ ಸಮಿತಿಯ ವಿಶೇಷ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಒಪ್ಪಿಸಲಾಯಿತು.

6. ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ. ವಿಷಯ:- ಅನಧಿಕೃತ ಕೃಷಿ ಪಂಪುಸೆಟ್ಟುಗಳಿಗೆ ಬಳುಸುತ್ತಿದ್ದ ವಿದ್ಯುತ್ತನ್ನು ಸಕ್ರಮಗೊಳಿಸುವುದು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಾನು ಪದೇ ಪದೇ ಹೇಳುವುದು ಅಷ್ಟು ಸರಿಕಾಣುವುದಿಲ್ಲ. ಏಕೆಂದರೆ ನಾ ಪ್ರತಿ ದಿವಸ ಎದ್ದರೆ ಅಡ್‌ಜರ್ನ್‌ಮೆಂಟ್ ಮೋಷನ್ ತರುತ್ತಾರೆ ಎಂಬ ಆಪಾದನೆ ನನ್ನ ಮೇಲೆ ಬರಬಹುದೆಂದು ಮೊದಲೇ ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ನಮ್ಮ ದುರ್ದೈವವೋ ಏನೋ ಗೊತ್ತಿಲ್ಲ. ಆರು ತಿಂಗಳಿಗೊಮ್ಮೆ ನಾವು ಸೇರುತ್ತೇವೆ. ಶಾಸಕರುಗಳಿಗೆ ಸಿಟ್ಟಿಂಗ್ಸ್ ಜಾಸ್ತಿ ದಿನಗಳು ಇದ್ದರೆ ಇಂಥ ಸಮಸ್ಯೆಗಳು ಬರುವುದಿಲ್ಲ. ಅಧಿವೇಶನ ಕಾಲಾವಧಿ ಸ್ವಲ್ಪ ದಿವಸವೇ ಇದ್ದ ಕಾರಣ ಅಷ್ಟು ದಿನಗಳಲ್ಲಿ ನಾವು ನಮ್ಮ ಎಲ್ಲ ಸಮಸ್ಯೆಗಳಿಗೆ ಯಾವ ರೀತಿಯ ಪರಿಹಾರವನ್ನು ಸರ್ಕಾರದಿಂದ ಪಡೆದುಕೊಳ್ಳಬಹುದು ಎಂಬ ದೃಷ್ಟಿಯಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅಲ್ಲದೆ, ಇದು ಮಹತ್ವದ ವಿಷಯ ಇದೆ ಎಂದು ತಮಗೆ ಗೊತ್ತಿದೆ. ತಾವು ನೇರವಾಗಿ ಇದರ ತೊಂದರೆಯನ್ನು ಅನುಭವಿಸುತ್ತಿದ್ದೀರಿ. ಈ ರಾಜ್ಯದ ರೈತರ ಅನಧಿಕೃತ ಕೃಷಿ ಪಂಪುಸೆಟ್ಟಗಳಿಗೆ ಬಳಸುತ್ತಿದ್ದ ವಿದ್ಯುತ್ತನ್ನು ಸಕ್ರಮಗೊಳಿಸಲು ವಿದ್ಯುತ್‌ಚ್ಛಕ್ತಿ ಮಂಡಳಿಯವರು ಇತ್ತೀಚೆಗೆ ವಿಧಿಸಿರುವಂಥ ದರ ವಿಚಾರದ ಬಗ್ಗೆ.

ಅಧ್ಯಕ್ಷರು:- ಇದನ್ನು ಯಾವ ನಿಯಮದಲ್ಲಿ ತೆಗೆದುಕೊಳ್ಳೋಣ? ಏಕೆಂದರೆ ಇದನ್ನು ತೆಗೆದುಕೊಳ್ಳುವುದರಲ್ಲಿ ಎರಡನೆ ಅಭಿಪ್ರಾಯ ಇಲ್ಲ. ಈಗಾಗಲೇ ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಬರೆದು ಕಳುಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಲುವಳಿ ಸೂಚನೆ ರೀತಿಯಲ್ಲಿ ತೆಗೆದುಕೊಳ್ಳಿ ಎಂದು ನಾನು ಕೇಳಿದ್ದೇನೆ. ಏಕೆಂದರೆ ಇದು ಬಹಳ ಮಹತ್ವದ್ದು. ಸುಮಾರು 11 ಲಕ್ಷ ಪಂಪು ಸೆಟ್‌ಗಳನ್ನು ಇಟ್ಟುಕೊಂಡ ರೈತರ ಸಮಸ್ಯೆ ಮತ್ತು ಅದರ ಜೊತೆಯಲ್ಲಿ ಅಗ್ರಿಕಲ್ಚರಲ್ ಪ್ರೊಡಕ್ಷನ್ಸ್‌ಗೆ ಹೊಡೆತ ಬೀಳತಕ್ಕ ಒಂದು ಸಂಗತಿ. ಇದರ ಜೊತೆಗೆ ಒಂದು ಸಾವಿರ ಕೋಟಿ ರೂಪಯಿ ಇವತ್ತು ಕೆ.ಇ.ಬಿ.ಯಲ್ಲಿ ಲಾಸ್ ಆಗುತ್ತಿದೆ.